ಎದುರಿಸಬೇಕಾದ ತಾರತಮ್ಯವು ಹಿಂದಿನ ವ್ಯವಸ್ಥೆಯಲ್ಲಿ ನಿರೀಕ್ಷಿಸಿದ್ದಕ್ಕೂ ಹೆಚ್ಚು ಘೋರವಾಗುತ್ತದೆ. ಎಂದರೆ ಇವೆಲ್ಲವನ್ನೂ ಸಮಾನ ರೀತಿಯಲ್ಲಿ ಸರಕಾರವೇ ತಯಾರಿಸಿ, ಉಚಿತವಾಗಿ ಎಲ್ಲಾ ಶಿಕ್ಷಕರಿಗೂ ವಿದ್ಯಾರ್ಥಿಗಳಿಗೂ ಪ್ರತಿ ವರ್ಷ ಬಹಳ ಮುಂಚಿತವಾಗಿಯೇ ಒದಗಿಸಬೇಕಾಗುತ್ತದೆ. ಇದು ಸರಕಾರಕ್ಕೆ ಗೊತ್ತಿರಲಿ.

### ಶಿಕ್ಷಕರ ಪಾತ್ರವೇನು?

ತರಬೇತಿಯ ಉದ್ದೇಶಗಳು, ಅವಧಿ, ಭಾಗಿಗಳಲ್ಲಿ ಆಗಬೇಕಾದ ಮಾಹಿತಿ, ವಿಚಾರ, ಧೋರಣೆ, ವರ್ತನೆ ಬದಲಾವಣೆಗಳ ಸ್ಪಷ್ಟ ಪರಿಕಲ್ಪನೆ, ತರಬೇತಿಯಲ್ಲಿ ಶಿಕ್ಷಕರ ಸಕ್ರಿಯ ಸಹಭಾಗಿತ್ವ ಇತ್ಯಾದಿಗಳಲ್ಲಿ ಅನೇಕ ದೋಷಗಳಿದ್ದು, ಗೊಂದಲಗಳಿವೆ. ಶಿಕ್ಷಕರಿಗೆ, ಅದರಲ್ಲೂ ಮುಖ್ಯವಾಗಿ ಒಂದಷ್ಟು ಸರ್ವಿಸ್ ಆಗಿರುವ ಶಿಕ್ಷಕರಿಗೆ ಹೊಸದನ್ನು ಕಲಿಯುವುದಕ್ಕೆ ಒಂದು ಬಗೆಯ ಮಾನಸಿಕ ಪ್ರತಿಬಂಧ. ಇದೆಲ್ಲಾ ಕಾರಣಕ್ಕೆ ತರಬೇತಿಗಳು ನಿರೀಕ್ಷಿತ ಪರಿಣಾಮ ಬೀರುವುದಿಲ್ಲ, ಕೇವಲ ಔಪಚಾರಿಕವಾಗುತ್ತವೆ. ಶಿಕ್ಷಕರಿಗೆ ಪೇಡ್ ಹಾಲಿಡೆ ಆಗುತ್ತದೆ. ತಮ್ಮ ತಮ್ಮ ಬೋಧನಾ ವಿಧಾನಗಳಲ್ಲಿ ಅದ್ಭುತ ನವೀನತೆಯನ್ನು ತೋರುವ ಶಿಕ್ಷಕರೂ ಇದ್ದಾರೆ. ಆದರೆ ಅದು ಅವರವರ ಸೃಜನಶೀಲತೆ, ಕಾಳಜಿಯ ಫಲವೇ ವಿನಃ ತರಬೇತಿಗಳ ಪರಿಣಾಮವಲ್ಲ. ಏನೇ ಒಂದು ಚಿಕ್ಕ ಬೆಳವಣಿಗೆಯಾದರೂ ಅದಕ್ಕೆ ತಕ್ಕ ತರಬೇತಿಯನ್ನು ಕೊಡಬೇಕಾದ ಶಿಕ್ಷಕರ ಸಂಖ್ಯೆ ಲಕ್ಷಾಂತರ. ಮುಖಾಮುಖಿ ಸಹಭಾಗೀ ತರಬೇತಿಯೇ ಸರ್ವ ಶ್ರೇಷ್ಠವಾದರೂ, ಅಷ್ಟು ದೊಡ್ಡ ಸಂಖ್ಯೆಯಲ್ಲಿ ತರಬೇತಿದಾರರು, ಸಂಪನ್ಮೂಲ ಮತ್ತು ಎಲ್ಲದಕ್ಕಿಂತ ಹೆಚ್ಚಾಗಿ ಸಮಯದ ಅಭಾವ.

ಇದಕ್ಕಾಗಿ ಈಗ ಇಲಾಖೆ ಹಮ್ಮಿಕೊಂಡಿರುವ ವಿಧಾನವೆಂದರೆ, ಟೆಲಿತರಗತಿಗಳು. ಟೆಲಿವಿಷನ್ ಪ್ರಸಾರದ ತಂತ್ರಜ್ಞಾನವನ್ನು ಬಳಸಿ ವ್ಯಾಪಕ ಪ್ರಮಾಣದಲ್ಲಿ ತರಬೇತಿಗಳನ್ನು ನೀಡುವುದು. ಇಂಥ ಒಂದೊಂದು ಗ್ರಾಹಕ ಕೇಂದ್ರದಲ್ಲಿ ನೂರು–– ನೂರೈವತ್ತು ಶಿಕ್ಷಕರನ್ನು ಕುಳ್ಳಿರಿಸಿ, ಹೆಚ್ಚಿನ ಮಟ್ಟಿಗೆ ಏಕಮುಖವಾಗಿ ಪ್ರಸಾರವಾಗುವ, ಅಪವಾದಕ್ಕೆ ಒಂದೆರಡು ಪ್ರಶ್ನೆಗೆ ಉತ್ತರವನ್ನು ನೀಡುವ, ಸಹಭಾಗಿತ್ವ ಹೆಚ್ಚುಕಡಿಮೆ ಸೊನ್ನೆಯಾಗಿರುವ ಇಂಥ ಸಾಮೂಹಿಕ ತರಬೇತಿಗಳಿಂದ ಈಗ ನಾವು ಮಾತಾಡುತ್ತಿರುವ ಕ್ರಾಂತಿಕಾರಿ ಪರೀಕ್ಷಾ ಪದ್ಧತಿಯ ತತ್ವ, ತಂತ್ರ, ವಿಧಾನಗಳನ್ನು ಸೈದ್ಧಾಂತಿಕವಾಗಿ ಕಲಿತು, ತರಗತಿ ಬೋಧನೆಯಲ್ಲಿ ಅಳವಡಿಸಿಕೊಳ್ಳಲು ಸಾಧ್ಯವೇ? ಪ್ರತ್ಯಕ್ಷ ತರಬೇತಿಯಲ್ಲಿಯೇ ಶಿಕ್ಷಕರು ಎಷ್ಟೊಂದು ಅವಧಾನವನ್ನು ಕಾಪಾಡಿಕೊಳ್ಳುತ್ತಾರೆ ಎಂಬುದರ ಬಗ್ಗೆ ಯಾವುದೇ ಸಂಶಯವಿಲ್ಲದವರಿಗೆ ಈ ಪರೋಕ್ಷ, ಜಂಗುಳಿಯ ತರಬೇತಿಯಲ್ಲಿ ಎಷ್ಟರ ಮಟ್ಟಿಗೆ ಅವಧಾನ ಒದಗುತ್ತದೆ ಎನ್ನುವುದರ ಬಗ್ಗೆ ಯಾವುದೇ ಭ್ರಮೆ ಬೇಡ.

ಶಾಲೆಗಳಲ್ಲಿ ಶಿಕ್ಷಕರ ಭಾರೀ ಕೊರತೆ. ಇದ್ದ ಶಿಕ್ಷಕರಿಗೂ ಬೋಧನೆಯ ಹೊರತಾಗಿ ಮಾಡಬೇಕಾದ ಅನೇಕ ಅಧಿಕೃತ, ಅನಧಿಕೃತ ಕೆಲಸ ಕಾರ್ಯಗಳು, ಮುಖ್ಯ ಶಿಕ್ಷಕರು ನಿಯತಕಾಲಿಕವಾಗಿ ಇಲಾಖೆಗೆ ಕಳಿಸಲೇ ಬೇಕಾದ ಅನೇಕ ಬಗೆಯ ಅಂಕಿಅಂಶಗಳು, ವರದಿಗಳು, ತನಗೆ ಕಂಪ್ಯೂಟರ್ ಜ್ಞಾನ ಇಲ್ಲದಕ್ಕಾಗಿ ಮುಖ್ಯ ಶಿಕ್ಷಕರು ಅಲ್ಪಸ್ವಲ್ಪ ಗೊತ್ತಿರುವ ಒಬ್ಬಿಬ್ಬರು ಶಿಕ್ಷಕರನ್ನು ಇದಕ್ಕಾಗಿ ಬಳಸಿಕೊಳ್ಳುವುದು, ಅನೇಕ ಬಗೆಯ ಇಲಾಖಾ ತರಬೇತಿಗಳು, ಕೆಲವು ಶಿಕ್ಷಕರಂತೂ ಭಾಗಿಗಳಾಗಿಯೋ, ಸಂಪನ್ಮೂಲ ವ್ಯಕ್ತಿಗಳಾಗಿಯೋ ಶಾಲೆಯಲ್ಲಿರುವುದಕ್ಕಿಂತ ತರಬೇತಿಯಲ್ಲಿರುವುದೇ ಹೆಚ್ಚು.

ಅದರ ಮೇಲೆ, ಶಾಲೆಯಲ್ಲಿ ಅಡುಗೆ ಮಾಡಿಸಿ ಮಕ್ಕಳಿಗೆ ಊಟ ಬಡಿಸುವ ಕೆಲಸ, ಜನಗಣತಿ ಕೆಲಸ, ಹತ್ತಾರು ಜಯಂತಿಗಳು, ಆಚರಣೆಗಳು, ಹಬ್ಬ ಹರಿದಿನಗಳು ಇವೆಲ್ಲಾ ಆಗಿ ಶಿಕ್ಷಕರು ಪ್ರಾಮಾಣಿಕವಾಗಿ ದುಡಿಯಬೇಕು ಎಂದರೂ ಅವರಿಗೆ ಅಪೇಕ್ಷಿತ ಗುಣಮಟ್ಟದ ಸಮಯ ಸಿಗುವುದು ದುರ್ಲಭ. ಈಗಾಗಲೇ ಈ ಸ್ಥಿತಿಯಿರುವಾಗ ಸಂಪೂರ್ಣ ಭಿನ್ನವಾದ ನೆಲೆಗಟ್ಟಿನಲ್ಲಿ ರೂಪಿಸಿ, ಸಜ್ಜುಗೊಂಡು ಜಾರಿಗೆ ಬರಬೇಕಾದ ತೆರೆದ ಪುಸ್ತಕ ಪರೀಕ್ಷೆಗಳ ವ್ಯವಸ್ಥೆಗೆ ತಕ್ಕಂತೆ ಮಕ್ಕಳಿಗೆ ಕಲಿಕೆಯನ್ನು ಸುಗಮಗೊಳಿಸುವ ಕಾರ್ಯ ಬಹಳ ಕಷ್ಟಕರ. ಈ ಸವಾಲನ್ನು ವಸ್ತುನಿಷ್ಠವಾಗಿ ಎದುರಿಸಿ ಪರಿಹಾರವನ್ನು ಕಂಡುಕೊಳ್ಳದಿದ್ದರೆ ಇನ್ನೊಮ್ಮೆ ಶಿಕ್ಷಕ ವರ್ಗದ ಮೇಲೆ ದಬ್ಬಾಳಿಕೆಯಾಗುತ್ತದೆ, ಇದರ ಘೋರ ಪರಿಣಾಮ ಮಕ್ಕಳ ಮೇಲೆ ಆಗುತ್ತದೆ.

ಸಾಧನ, ಸೌಕರ್ಯ: ತೆರೆದ ಪುಸ್ತಕ ಪರೀಕ್ಷೆಯನ್ನು ಎದುರಿಸಿ ಅದರ ಪರಿಪೂರ್ಣ ಪ್ರಯೋಜನವನ್ನು ವಿದ್ಯಾರ್ಥಿಗಳು ಪಡೆಯಬೇಕು ಎಂದರೆ ಶಾಲೆಗಳಲ್ಲಿ ಗ್ರಂಥಾಲಯಗಳು, ಪ್ರಯೋಗಶಾಲೆಗಳು, ಕೈದೋಟಗಳು, ಆಟದ ಮೈದಾನಗಳು, ಶೈಕ್ಷಣಿಕ ಪ್ರವಾಸಗಳು, ಪ್ರಾಜೆಕ್ಟ್ ಕೆಲಸಗಳು, ಕೌಶಲ ಸ್ಪರ್ಧೆಗಳು ಇತ್ಯಾದಿ ಸಮಾನವಾಗಿ ಲಭ್ಯವಿರಬೇಕಾಗುತ್ತದೆ. ಇದನ್ನು ಖಚಿತಪಡಿಸಿಕೊಳ್ಳದೇ ಇದ್ದರೆ ವ್ಯವಸ್ಥೆಯಲ್ಲಿಯೇ ತಾರತಮ್ಯ ಸಾಕಿದಂತಾಗುತ್ತದೆ.

### ಯಾವ ಹಂತದಲ್ಲಿ?

ಅಪೇಕ್ಷಿತ ಹೊಸ ಪರೀಕ್ಷಾ ಪದ್ಧತಿಯ ದೀರ್ಘಕಾಲೀನ, ಹೆಚ್ಚು ಸ್ಥಿರವಾದ ಪ್ರಯೋಜನಗಳ ನಿಟ್ಟಿನಲ್ಲಿ ಸರಕಾರವು ಮೇಲೆ ಹೇಳಿದ ಎಲ್ಲಾ ಸವಾಲುಗಳನ್ನು ಎದುರಿಸಿ ಗೆಲ್ಲುವ ಇಚ್ಛಾಶಕ್ತಿ, ಮತ್ತು ಸಂಪನ್ಮೂಲವನ್ನು ಹೊಂದಿದೆ ಎಂದಿಟ್ಟುಕೊಳ್ಳೋಣ. ಮುಂದಿನ ಸವಾಲು ಎಷ್ಟನೇ ತರಗತಿಯಿಂದ ಈ ಹೊಸ ಪರೀಕ್ಷಾ ಪದ್ಧತಿಯನ್ನು ಜಾರಿಗೆ ತಂದರೆ ಒಳ್ಳೆಯದು ಎಂಬುದು. ಒಂದರಿಂದ ಮೂರನೇ ತರಗತಿಯವರೆಗೆ ಜಾರಿಯಲ್ಲಿರುವ ನಲಿ–ಕಲಿ ಎನ್ನುವ ಪದ್ಧತಿ ಈಗಾಗಲೇ ಮುಕ್ತ ಕಲಿಕೆಯ ಮಾರ್ಗವನ್ನು ಅನುಸರಿಸುತ್ತದೆ ಎಂಬ ಭಾವನೆ ಇದೆ. ಆದರೂ ವ್ಯವಸ್ಥೆಯ ಅಥವಾ ಶಿಕ್ಷಕರ ಬೋಧನಾ ವಿಧಾನ/ ಕೌಶಲ/ ಪ್ರಾಮಾಣಿಕತೆಯ ಕೊರತೆಯಿಂದ ಈ ಮೂರು ವರ್ಷವೂ ಮಕ್ಕಳು ನಲಿಯಬಹುದೇನೋ ಆದರೆ ನಿರೀಕ್ಷಿತ ಶೈಕ್ಷಣಿಕ ಗುರಿಗಳು ಈಡೇರುವುದಿಲ್ಲ ಎಂಬ ಟೀಕೆ ಇದ್ದೇ ಇದೆ.

ಆದರೂ ಹೊಸ ಶಿಕ್ಷಣ ಮತ್ತು ಪರೀಕ್ಷಾ ಪದ್ಧತಿಯನ್ನು ನಾಲ್ಕನೇ ತರಗತಿಯಿಂದ ಎಂಟನೇ ತರಗತಿಯವರೆಗೆ ಜಾರಿಗೆ ತಂದರೆ ಹೇಗೆ ಎಂಬ ಆಲೋಚನೆ ಸರಕಾರಕ್ಕಿದ್ದಂತೆ ತೋರುತ್ತದೆ. ಈ ಪದ್ಧತಿಯನ್ನು ಆಳವಾಗಿ ಅಧ್ಯಯನ ಮಾಡಿ, ನನ್ನ ಹಲವಾರು ಕಾರ್ಯಶಿಬಿರಗಳನ್ನು ಇದನ್ನೇ ತತ್ವ ಮತ್ತು ತಂತ್ರವನ್ನಾಗಿ ಬಳಸಿ, ಅದರ ಪ್ರಯೋಜನವನ್ನು ಕಂಡಿರುವ ನನ್ನ ಅನಿಸಿಕೆ ಪ್ರಕಾರ, ಈ ಹೊಸ ಪದ್ಧತಿಯನ್ನು ನಾಲ್ಕನೇ ತರಗತಿಯ ಬದಲು (ಸುಮಾರು) ಏಳನೇ ತರಗತಿಯಿಂದ ಜಾರಿಗೆ ತರುವುದು ಒಳ್ಳೆಯದು. ಮಕ್ಕಳು ಅಷ್ಟು ಹೊತ್ತಿಗೆ ಪ್ರೌಢರಾಗಿರುತ್ತಾರೆ ಎನ್ನುವುದೇ ಒಂದು ಮುಖ್ಯ ಕಾರಣ(ಇದಕ್ಕೆ ಹೊರತಾದ ಅಭಿಪ್ರಾಯಗಳೂ ಇರಬಹುದು). ಎಂಟನೇ ತರಗತಿಯವರೆಗೆ ಈ ಪದ್ಧತಿಯನ್ನು ಅನುಸರಿಸಿ ಒಂಬತ್ತು ಮತ್ತು ಹತ್ತರಲ್ಲಿ ಇದನ್ನು ಕೈಬಿಟ್ಟು ಹಳೆಯ ಕಂಠಪಾಠ ಪದ್ಧತಿಗೆ ಮರಳಬೇಕೇ ಅಥವಾ ಹತ್ತನೇ ತರಗತಿಯ ವರೆಗೂ ಹೊಸ ಪದ್ಧತಿಯನ್ನು ಮುಂದುವರಿಸಬೇಕೇ ಎಂಬುದು

